ಇಲಾಖೆಯವರು ಕಂಪನಿಗೆ ಬಂದು ಹೋದ ಸುದ್ದಿಯನ್ನು ಭವರ್ ಲಾಲ್ ಮನೆಯಲ್ಲಿ ತಾಯಿ ಹಾಗೂ ಹೆಂಡತಿಗೆ ತಿಳಿಸಿದ್ದ. ಅಂದು ರಾತ್ರಿ ಊಟ ಮಾಡುತ್ತಿರುವಾಗ ಎಲ್ಲರ ಮುಂದೆಯೂ ಆಸ್ಕರ್ ವೈಲ್ಡ್ ತನಗೆ ಸಾಯಿಪ್ರಭೆ ಇಷ್ಟವಾಗಲಿಲ್ಲವೆಂದೂ, ತಾನವಳನ್ನು ಮದುವೆಯಾಗುವುದಿಲ್ಲವೆಂದೂ ಹೇಳಿದ. ಆದರೆ ತನ್ನ ಮತ್ತು ಸಾಯಿಪ್ರಭೆಯ ಮಧ್ಯೆ ನಡೆದ ಮಾತುಕತೆಯ ಬಗ್ಗೆ ಮಾತ್ರ ಬಾಯಿಬಿಡಲಿಲ್ಲ. ಏಕೆಂದು ಯಾರೂ ಪ್ರಶ್ನಿಸಲಿಲ್ಲ. ತಾನು ಹೇಳಬೇಕಾದ್ದನ್ನು ಮೊಮ್ಮಗನೇ ಹೇಳಿದನಲ್ಲ ಎನ್ನುವ ಸಂಭ್ರಮ ಗುನ್ನಾಲಾಲನಲ್ಲಿ ಮನೆಮಾಡಿತು.

ಅಹಲ್ಯಾ ರಾಣಿಗೂ ಅಂಥ ಬೇಸರವೇನೂ ಆಗಿರಲಿಲ್ಲ. ಏಕೆಂದರೆ, ಅಹಲ್ಯಾ ರಾಣಿಯ ಮನೆಯಲ್ಲಿ ಯಾರಿಗೂ ತಿಳಿಯದಂತೆ ಹುಡುಗ–ಹುಡುಗಿಯ ಹೆಸರು ಬಲಗಳ ಬಗ್ಗೆ ತನ್ನ ತೌರು ಮನೆಯ ಕಾಯಂ ಪುರೋಹಿತನಲ್ಲಿ ವಿಚಾರಿಸಲು ತನ್ನ ಅಣ್ಣನಿಗೆ ತಿಳಿಸಿದ್ದಳು. ಸಂಜೆ ತಾನೇ ಫೋನ್ ಮಾಡಿದ್ದ ಅಣ್ಣ ಅಷ್ಟೇನೂ ಒಳ್ಳೆಯದಾಗಿ ಕೂಡಿ ಬಂದಿಲ್ಲವೆಂಬ ವಿಷಯವನ್ನು ತಿಳಿಸಿದ್ದ. ಜೊತೆಗೆ ಗಂಡ ಭವರ್ ಲಾಲ್ ಜಿಎಸ್‌ಟಿಯವರು ರೈಡ್ ಮಾಡಿದ್ದ ವಿಷಯವನ್ನು ತಿಳಿಸಿದ್ದ ಸಂಗತಿ ಅಣ್ಣನ ಸಮಾಚಾರದೊಂದಿಗೆ ತಳಕು ಹಾಕಿಕೊಂಡು ಬಲವಾದ ಗೊಂದಲಕ್ಕೆ ಬಿದ್ದಿದ್ದಳು. ಮಗನ ಮಾತುಗಳಿಂದ ಗೊಂದಲಕ್ಕೆ ತೆರೆ ಬಿದ್ದು ಉಲ್ಲಸಿತಳಾಗಿದ್ದಳು.

'ನಿನ್ನ ಇಷ್ಟದಂತೆಯೇ ಆಗಲಿ ಬಿಡು ಸೋನಾ, ಬೇರೆಲ್ಲಾದರೂ ನೋಡಿದರಾಯಿತು. ನಿನಗೆ ಇಷ್ಟವಿಲ್ಲವೆಂದ ಮೇಲೆ ಆ ಬಗ್ಗೆ ಮುಂದುವರೆಯುವುದು ಬೇಡ. ಸಾಯಿಪ್ರಭೆಯ ಅಮ್ಮನಿಗೆ ಇನ್ನೆರಡು ದಿನಗಳಲ್ಲಿ ನಾನೇ ಫೋನ್ ಮಾಡಿ ತಿಳಿಸುತ್ತೇನೆ. ಒಂದು ಗಂಡಿಗೊಬ್ಬಳು ಹೆಣ್ಣನ್ನು, ಒಂದು ಹೆಣ್ಣಿಗೊಬ್ಬ ಗಂಡನ್ನು ಬ್ರಹ್ಮದೇವ ಬರೆದಿಟ್ಟೇ ಇರುತ್ತಾನೆ. ಬೇಸರವಾದರೆ ಒಂದಿಪ್ಪತ್ತು ದಿನ ಲಂಡನ್ನಿಗೋ ಇಲ್ಲ ಸ್ವಿಟ್ಜರ್ಲೆಂಡಿಗೋ ಹೋಗಿ ಬಾ' ಎಂದು ಅಹಲ್ಯಾ ರಾಣಿ ಮಗನ ತಲೆ ನೇವರಿಸುತ್ತಾ ಹೇಳಿದ್ದಳು. ಅಂದು ರಾತ್ರಿ ಹನ್ನೊಂದು ಗಂಟೆಯ ಸಮಯದಲ್ಲಿ ಆಸ್ಕರ್ ವೈಲ್ಡ್ ತನ್ನ ತಾತನ ರೂಮಿಗೆ ಹೋಗಿ ಪುಣೆಯ ಭಜನ್ ಲಾಲ್ ಪುರಾನೆವಾಲೆಯ ಮನೆಯಲ್ಲಿ ತನ್ನ ಹಾಗೂ ಸಾಯಿಪ್ರಭೆಯ ನಡುವೆ ನಡೆದ ಮಾತುಕತೆಗಳ ಪ್ರತಿಯೊಂದು ವಿವರವನ್ನೂ ತಾತನ ಬಳಿ ಹೇಳಿಕೊಂಡು ಹಗುರವಾದ. ತಾನು ಹುಡುಗಿಯನ್ನು ಬೇಡ ಅಂದಿದ್ದಕ್ಕೆ ತಾತ ಗುನ್ನಾಲಾಲ್ ಎಲ್ಲಿ ಬೇಸರ ಮಾಡಿಕೊಳ್ಳುತ್ತಾನೋ ಎಂಬ ಆತಂಕದಲ್ಲಿ ಆಸ್ಕರ್ ವೈಲ್ಡ್ ಸತ್ಯವನ್ನು ಹೇಳಿದ್ದ. ತಾನು ಸಂದೀಪ್ ಕೊಚಾರನ ಬಳಿ ಇವತ್ತು ಹೋಗಿದ್ದು ಒಳ್ಳೆಯದಾಯಿತೆಂದುಕೊಂಡ ಗುನ್ನಾಲಾಲ್. ಎಲ್ಲಕ್ಕೂ ಮಿಗಿಲಾಗಿ ಅತ್ಯಂತ ಸಂಪ್ರದಾಯಸ್ಥ ಕುಟುಂಬದ ಭಜನ್ ಲಾಲ್ ಪುರಾನೆವಾಲೆಯ ಮಗಳ ಭಯ, ಭಕ್ತಿ, ನಯ, ವಿನಯಗಳ ಹಿಂದೆ ಬಚ್ಚಿಟ್ಟುಕೊಂಡಿದ್ದ ಧೂರ್ತತನದ ಅನಾವರಣ ಅವನನ್ನು ದಿಗ್ಭ್ರಾಂತನನ್ನಾಗಿಸಿತ್ತು.

'ಮೊದಲೇ ಹೇಳಿದ್ದು ಒಳ್ಳೆಯದಾಯ್ತು ಸೋನಾ. ಜಗತ್ತು ನಾವು ತಿಳಿದುಕೊಂಡಂತೆ ಇರುವುದಿಲ್ಲ. ಸದ್ಯ ದೊಡ್ಡದೊಂದು ಗಂಡಾಂತರ ತಪ್ಪಿತು ನೋಡು. ಪಾಪ, ಆ ಹುಡುಗಿಯದೂ ತಪ್ಪಿಲ್ಲ ಮತ್ತು ಎಲ್ಲಾ ವಿಷಯಗಳನ್ನು ನಿನ್ನ ಬಳಿ ಹಂಚಿಕೊಂಡ ಅವಳ ಧೈರ್ಯವನ್ನು ಖಂಡಿತವಾಗಿಯೂ ಮೆಚ್ಚಬೇಕು. ಒಳ್ಳೆಯ ಹುಡುಗಿಯನ್ನು ಹುಡುಕಿದರಾಯಿತು. ನಮ್ಮ ಕುಟುಂಬಕ್ಕೆ ಹೆಣ್ಣು ಕೊಡುವವರಿಗೇನೂ ಬರವಿಲ್ಲ. ಬಡವರಾದರೂ ಸರಿ, ಒಳ್ಳೆಯ ಕಡೆ ನೋಡೋಣ. ನಿನ್ನ ಫ್ರೆಂಡ್ಸ್ ಸರ್ಕಲ್‌ನಲ್ಲಿ ಯಾರಾದರೂ ಇದ್ದರೆ ಮುಜುಗರವಿಲ್ಲದೆ ತಿಳಿಸು. ನನಗೂ, ನಿನಗೂ ಬಿದ್ದ ಆ ಕನಸು ನಿನಗೆ ಒಳ್ಳೆಯ ಸಂಗಾತಿ ಸಿಗುವ ಮುನ್ಸೂಚನೆಯೇ ಆಗಿದೆ. ನೀನು ನಿಶ್ಚಿಂತೆಯಿಂದ ಮಲಗು' ಎಂದು ಸಮಾಧಾನ ಮಾಡಿ ಕಳಿಸಿದ್ದ.

ಮೊಮ್ಮಗ ತನ್ನ ರೂಮಿಗೆ ಹೋದ ಬಳಿಕ ಗುನ್ನಾಲಾಲನಿಗೆ ತಾನು ಮಫತ್ಲಾಲ್ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದಾಗ ನಡೆದ ಘಟನೆಯೊಂದು ನೆನಪಾಗಿತ್ತು. ಮುಂಬಯಿಗೆ ಬಂದು ಮೂರನೆಯ ವರ್ಷವಾಗಿತ್ತು ಅದು. ದುಡ್ಡು ಸುಮಾರಾಗಿ ಓಡಾಡತೊಡಗಿತ್ತು. ಆಗೀಗ ಮೀಡಿಯಂ ಕ್ಲಾಸ್ ಬಿಯರ್ ಬಾರುಗಳಿಗೆ ಹೋಗಿ ಬಿಯರ್ ಕುಡಿದು ಡ್ಯಾನ್ಸ್ ನೋಡಿಕೊಂಡು ಬರುತ್ತಿದ್ದ. ಹೆಣ್ಣಿನ ಬಗ್ಗೆ ಸಹಜವಾಗಿ ಕುತೂಹಲ ಹುಟ್ಟಿಕೊಳ್ಳುವ ವಯಸ್ಸು. ತಾನು ಕೆಲಸ ಮಾಡುತ್ತಿದ್ದ ಮಫತ್ಲಾಲ್ ಫ್ಯಾಕ್ಟರಿಯ ಕಚೇರಿಯಲ್ಲಿ ಕ್ಲೀನಿಂಗ್ ಕೆಲಸ ಮಾಡುತ್ತಿದ್ದ ತನಗಿಂತಲೂ ಎರಡು ಮೂರು ವರ್ಷ ದೊಡ್ಡವಳಾದ ನಾಗೂಬಾಯಿ ಮೈತುಂಬಿಕೊಂಡು ನೋಡಲು ಆಕರ್ಷಕವಾಗಿದ್ದಳು. ಗುನ್ನಾಲಾಲ್ ಅವಳನ್ನು ಅನೇಕ ಸಾರಿ ದೃಷ್ಟಿಸಿ ಕಣ್ತುಂಬಿಕೊಂಡು ನವಿರಾದ ಭಾವನೆಗಳಲ್ಲಿ ಮುಳುಗುತ್ತಿದ್ದ. ಇವನ ನೋಟ ಅವಳ ಗಮನಕ್ಕೂ ಬಂದು ಅವನು ನೋಡಿದಾಗಲೆಲ್ಲಾ ಸುಂದರ ನಗುವನ್ನು ಬಿಸಾಕುತ್ತಿದ್ದಳು. ಕಡೆಗೂ ಅವಳನ್ನು ಮಾತನಾಡಿಸಿಬಿಟ್ಟ. ಅವಳು ಕೂಡ ಖುಷಿಯಿಂದ ಮಾತನಾಡಿದ್ದಳು. ಅವಳ ಮನೆ ಫ್ಯಾಕ್ಟರಿಗೆ ಹತ್ತಿರದಲ್ಲಿಯೇ ಇತ್ತು. ಬೆಳಿಗ್ಗೆ ಬೇಗನೆ ಬಂದು ಆಫೀಸಿನ ಕ್ಲೀನಿಂಗ್ ಕೆಲಸದಲ್ಲಿ ತೊಡಗುತ್ತಿದ್ದಳು. ಕಚೇರಿಯ ಸಿಬ್ಬಂದಿಗೆ ಚಹಾ ಕೂಡ ಮಾಡಿಕೊಡುತ್ತಿದ್ದಳು. ಅವಳು ಕಚೇರಿಯಲ್ಲಿ ಕೆಲಸ ಮಾಡುವ ಎಲ್ಲ ಸಿಬ್ಬಂದಿಯನ್ನೂ 'ಮಾಲೀಕ್' ಎಂದೇ ಸಂಬೋಧಿಸುತ್ತಿದ್ದಳು. ಅಂತೆಯೇ ಗುನ್ನಾಲಾಲನನ್ನೂ ಮಾಲೀಕ್ ಎಂದು ಕರೆಯುತ್ತಿದ್ದಳು. ಮಾತು ಪಿಸುಮಾತುಗಳಿಗೆ ರೂಪಾಂತರಗೊಂಡು ಸ್ನೇಹ ಸಲುಗೆಗೆ ತಿರುಗಿತ್ತು. ಒಮ್ಮೆ ನಾಗೂಬಾಯಿ ಜೊತೆ ಸೇರಬೇಕೆಂಬ ಉತ್ಕಟವಾದ ಬಯಕೆ ಅಂಕುರಿಸಿತ್ತು.

'ನನ್ನನ್ನು ಮದುವೆಯಾಗುತ್ತೀಯ?' ಎಂದು ಒಂದು ದಿನ ಕೇಳಿಯೇಬಿಟ್ಟಿದ್ದ ಗುನ್ನಾಲಾಲ್. ಪ್ರೇಮದ ಹಿಂದೆ ಕಾಮ ಸದಾ ಕಣ್ಣಾಮುಚ್ಚಾಲೆಯಾಟ ಆಡುತ್ತಿರುವುದು ಮೇಲ್ನೋಟಕ್ಕೆ ಯಾರಿಗೂ ಗೊತ್ತಾಗುವುದಿಲ್ಲ. ನಾಗೂಬಾಯಿ ನಾಚಿ ನೀರಾಗಿದ್ದಳು. 'ಮನೆಗೆ ಬಂದು ಅಪ್ಪ–ಅಮ್ಮನನ್ನು ಕೇಳಿ ಮಾಲೀಕ್, ಅವರು ಒಪ್ಪಿದರೆ ನಾನು ರೆಡಿ' ಎಂದೇ ಬಿಟ್ಟಳು ಬೆಡಗಿ. ಹಾಗೆ ಹೇಳಿ ಒಂದು ವಾರಕ್ಕೆ ಆ ಘಟನೆ ನಡೆದುಹೋಗಿತ್ತು. ಅಂದು ಅವನು ಅರ್ಧ ಗಂಟೆ ಬೇಗನೆ ಫ್ಯಾಕ್ಟರಿಗೆ ಬಂದಿದ್ದ. ಕಚೇರಿಯ ಪಕ್ಕದ ಫ್ಯಾಬ್ರಿಕ್ ಸ್ಟಾಕ್ ಯಾರ್ಡ್‌ನಿಂದ ಸಣ್ಣಗೆ ನರಳುತ್ತಿರುವ ಧ್ವನಿ ಕೇಳಿಸಿತ್ತು. ಗುನ್ನಾಲಾಲ್ ಸರಸರನೆ ಆ ಕಡೆ ನಡೆದಿದ್ದ. ಫ್ಯಾಬ್ರಿಕ್ ಬಂಡಲ್ಲುಗಳ ಮೇಲೆ ಸೆಕ್ಯೂರಿಟಿ ಗಾರ್ಡ್ ಶ್ಯಾಂ ಬಹಾದ್ದೂರನೊಂದಿಗೆ ನಾಗೂಬಾಯಿ ಅರೆಬೆತ್ತಲೆಯಾಗಿ ಮಲಗಿ ಸುಖದಿಂದ ನರಳುತ್ತಿದ್ದಳು. ಆ ಕ್ಷಣ ಅಲ್ಲಿಂದ ಓಡಿ ಬಂದು ತನ್ನ ಜಾಗದಲ್ಲಿ ಕುಳಿತಿದ್ದ. ಇದಾಗಿ ಇಪ್ಪತ್ತು ದಿನಗಳಿಗೆ ನಾಗೂಬಾಯಿ ಶ್ಯಾಂ ಬಹಾದ್ದೂರನೊಂದಿಗೆ ಅಲ್ಲಿಂದ ಎಲ್ಲಿಗೋ ಓಡಿಹೋಗಿದ್ದಳು. ಈ ಘಟನೆ ನಡೆದ ಎಂಟು ವರ್ಷಗಳ ನಂತರ ಗುನ್ನಾಲಾಲನ ಮದುವೆಯಾಗಿದ್ದು. ಆ ವೇಳೆಗೆ ಗುನ್ನಾಲಾಲ್, ಮಫತ್ಲಾಲ್ ಗುನ್ನಾಲಾಲ್ ಆಗಿ ಬದಲಾಗಿಬಿಟ್ಟಿದ್ದ! ಹಿಂದಿನ ಘಟನೆ ನೆನಪಾಗಿ ಗುನ್ನಾಲಾಲನ ಮುಖದಲ್ಲಿ ಸಣ್ಣದೊಂದು ಮಂದಹಾಸ ಮಿನುಗಿ ಮಾಯವಾಗಿತ್ತು.

* * *

ಜುಹೂವಿನ **J W Marriott** ಹೋಟೆಲ್ಲಿಗೆ ತನ್ನ ಕುಟುಂಬದೊಂದಿಗೆ ಗುನ್ನಾಲಾಲ್ ಆಗಮಿಸಿದಾಗ ಸಂಜೆ ಏಳು ಗಂಟೆಯಾಗಿತ್ತು. **Marriott** ಹೋಟೆಲ್ಲಿನ ಪಾರ್ಟಿ ಹಾಲ್‌ನಲ್ಲಿ ಮುಂಬಯಿಯ ಶ್ರೀಮಂತ ಉದ್ಯಮಿಗಳು ನೆರೆದಿದ್ದರು. ಅರವತ್ತು ಎಪ್ಪತ್ತು ಮಂದಿ ಮಾತ್ರ ಇದ್ದರು. ಗುನ್ನಾಲಾಲ್ ಮತ್ತು ಆತನ ಕುಟುಂಬವನ್ನು ಜಿಎಸ್‌ಟಿ ಕಮಿಷನರ್ ವಿಕ್ರಂ ದೇಶಪಾಂಡೆ ಸ್ವಾಗತಿಸಿದ್ದ. ಆಸ್ಕರ್ ವೈಲ್ಡನ ಕೈಕುಲುಕಿ 'ವೆಲ್ ಕಮ್ ಯಂಗ್ ಜಂಟಲ್‌ಮ್ಯಾನ್' ಎಂದು ವಿಶೇಷವಾಗಿ ಬರಮಾಡಿಕೊಂಡಿದ್ದ ವಿಕ್ರಂ ದೇಶಪಾಂಡೆ. ಅಸ್ಟ್ರಾಲಜರ್ ಸಂದೀಪ್ ಕೊಚಾರ್ ಮುಂದಿನ ಸಾಲಿನಲ್ಲಿ ಕುಳಿತಿದ್ದ. ವಿಕ್ರಂ ದೇಶಪಾಂಡೆ ತನ್ನ ಒಬ್ಬಳೇ ಮಗಳ ಇಪ್ಪತ್ತನಾಲ್ಕನೆಯ ಹುಟ್ಟುಹಬ್ಬದ ಆಚರಣೆಗೆ ಕೆಲವರೇ ಗಣ್ಯರನ್ನು ಆಹ್ವಾನಿಸಿದ್ದ. ಗುನ್ನಾಲಾಲನಿಗೂ ಸಹ ತಾನು ಫೋನ್ ಮಾಡಿ ಆಹ್ವಾನಿಸಿದ್ದನಲ್ಲದೆ, ಸಂದೀಪ್ ಕೊಚಾರನ ಮೂಲಕ ಸಹ ಇನ್ವಿಟೇಷನ್ ಕೊಟ್ಟಿದ್ದ. ಗುನ್ನಾಲಾಲ್ ಸಂದೀಪ್ ಕೊಚಾರನಿಗೆ ತನ್ನ ಕುಟುಂಬದ ಸದಸ್ಯರನ್ನು ಪರಿಚಯಿಸಿ ತಾನು ಕೊಚಾರನ ಪಕ್ಕದಲ್ಲಿ ಕುಳಿತಿದ್ದ. ಕೊಚಾರ್ 'ಗುನ್ನಾಲಾಲ್ ಜಿ, ವಿಕ್ರಂ ದೇಶಪಾಂಡೆ ಸಾಹೇಬರಿಗೆ ಜಿಎಸ್‌ಟಿ ಕಮಿಷನರ್ ಹುದ್ದೆಯಿಂದ ಮುಂಬಯಿ ಮಹಾನಗರ ಪಾಲಿಕೆಯ ಕಮಿಷನರ್ ಹುದ್ದೆಗೆ ವರ್ಗಾವಣೆ ಆಗುತ್ತಿದೆ. ಫೈಲಿಗೆ ಸಿಎಂ ಸಾಹೇಬರ ಸಹಿ ಆಗಿದೆ. ಇನ್ನೊಂದು ವಾರದಲ್ಲಿ ಆದೇಶ ಹೊರಬೀಳುತ್ತಿದೆ. ನನ್ನದೂ ರೆಕಮೆಂಡೇಷನ್ ಇದೆ. ನಿಮಗೆ ಗೊತ್ತಲ್ಲ, ಈ ಮುಂಬಯಿ ಮಹಾನಗರ ಪಾಲಿಕೆಯ ಕಮಿಷನರ್ ಹುದ್ದೆ ಹತ್ತು ಮಂತ್ರಿಗಳ ಹುದ್ದೆಗೆ ಸಮ. ಫಂಕ್ಷನ್‌ಗೆ ಇನ್ನೇನು ಕೆಲವೇ